ಅಗೋಚರವಾದುದು ವಿಸ್ಮಯ ಎಂದು ದಮಯಂತಿ ಬೆರಗಾದಳು! ಅವಳು ಪತಿಯನ್ನು ಕಾಣದೆ ತೊಳಲಾಡುತ್ತ ಕಾತುರದಿಂದ ಬರುತ್ತಿರುವುದನ್ನು ಹೊಸಬರಾದ ವ್ಯಾಪಾರಿಗಳು ನೋಡಿದರು. ನೋಡ ನೋಡುತ್ತ– ಇವಳು ವನ ದೇವತೆಯೋ? ದೇವತಾ ಸ್ತ್ರೀಯೋ? ಮನ್ಮಥನ ಸತಿ ರತಿಯೋ? ಸರಸ್ವತಿಯೋ? ಅಥವಾ ರಾಕ್ಷಸಿಯೋ? ಇವಳು ಯಾರ ಪತ್ನಿಯೋ? ಮಾಯಾ ರೂಪಿನ ಭೂರಿ ಭೂತವೋ? ತಿಳಿಯಲಾರದು– ಎಂದು ಭಯಗೊಂಡು ಆ ಬಣಜಿಗರು ಓಡಿದರು.

ಅವಳು ಭೀತಿಯಿಂದ ಓಡುತ್ತಿರುವ ವೈಶ್ಯರ ಹೇಡಿತನ ಕಂಡು ನಸು ನಗುತ್ತ ಅವರ ಬಿಡಾರದಲ್ಲಿಗೆ ಬಂದಳು. ಅವರನ್ನು ಮಾತಾಡಿಸುತ್ತ 'ನೀವೇಕೆ ಓಡುತ್ತಿರುವಿರಿ? ನಾನು ನಿಮಗೆ ತೊಂದರೆ ಮಾಡುವವಳಲ್ಲ. ನಾನು ಜಗತ್ತಿನ ಹೆಸರುವಾಸಿ ರಾಜ ನಳನೃಪನ ಮಡದಿ' ಎಂದು ಹೇಳಿ, ಅವರ ಕುತೂಹಲದ ಮೌನ ತಣಿಸಲು ತನ್ನ ನೋವಿನ ಮಿಡಿತದ ಮಾತು ಮುಂದುವರೆಸಿ 'ವೀರಸೇನನ ಮಗ ನಳನೃಪ ಜೂಜಿನಲ್ಲಿ ರಾಜ್ಯವನ್ನು ಸೋತ. ಆ ಕಾರಣದಿಂದ ಕಾಡಿಗೆ ಬಂದು ನನ್ನನ್ನು ಅಗಲಿಹೋದ. ನಾನು ದಾರಿ ತಪ್ಪಿದೆ. ಪರದೇಶಿಯಾದೆ. ತಾವು ನನಗೆ ಯಾವುದಾದರೂ ಒಂದು ಊರನ್ನು ತೋರಿಸಿ' ಎಂದು ದುಃಖದಿಂದ ಕಣ್ಣೀರು ಸುರಿಸಿ ಕೇಳಿಕೊಂಡಳು.

ಆ ಬಣಜಿಗರು, 'ತಾಯಿಯೇ, ನಮಗಿಂದು ನಿಮ್ಮ ಪಾದದ ದರ್ಶನವಾಯಿತು. ನಾವು ಧನ್ಯರು. ನಿಮ್ಮನ್ನು ವಿಧಿ ಈ ಅವಸ್ಥೆಗೆ ತಂದಿತೇ? ನೋಯದಿರಿ. ಮುಂದೆ ಚೈದ್ಯ ಪಟ್ಟಣವಿದೆ' ಎಂದು ಧೈರ್ಯದ ಮಾತಾಡುತ್ತಿರಲು ಸೂರ್ಯನು ಪಶ್ಚಿಮಾಂಬುದಿಗೆ ಇಳಿದನು.

ಹಗಲು ಸವೆಯಿತು. ಹೊಂಬಿಸಿಲು ಹಿಮ್ಮೆಟ್ಟಿತು. ಕತ್ತಲೆ ಭೂಮಿಯನ್ನು– ಪೆಟ್ಟಿಗೆ ಮುಚ್ಚುವ ರೀತಿಯಲ್ಲಿ ಆವರಿಸಿತು. ಸುಗುಣೆ ದಮಯಂತಿಯನ್ನು ನೋಡಲು ಆಶಿಸಿ ಬಂದ ದೇವತೆಗಳಂತೆ ಆಕಾಶದಲ್ಲಿ ನಕ್ಷತ್ರಗಳು ಮೂಡಿ ಪ್ರಜ್ವಲಿಸಿದವು.

ಅವನಿಪ ಧರ್ಮಜನೇ ಕೇಳು. ವೈಶ್ಯರು ಒಂದು ಕಡೆ ಗೂಡಾರವನ್ನು ಹಾಕಿ ಬೀಡುಬಿಟ್ಟು ಮಲಗಿದರು. ರಾತ್ರಿಯಲ್ಲಿ ಅವರ ಗಡುವಿನ ದಿನ ಬಂದಿತೋ ಎಂಬಂತೆ ಆನೆಗಳ ಹಿಂಡು ಬಂದಿತು. ಅವು ಬಾಯಾರಿ ನೀರಿಗಾಗಿ ಕೊಳದ ಕಡೆ ಅವಸರವಾಗಿ ಹೋಗುವ ದಾರಿಯಲ್ಲಿ ಬೆಟ್ಟದಂತೆ ಬಂದು ಅವರನ್ನು ಮುತ್ತಿಕೊಂಡವು.

ಅವು ಮರಗಳನ್ನು ಮುರಿಯುತ್ತ, ಮೆಳೆಗಳನ್ನು ತೀಡಿ ಮೆಟ್ಟಿದವು. ದಾಡೆಗಳಿಂದ ದಿಣ್ಣೆ ಗುಡ್ಡಗಳನ್ನು ಕಿತ್ತಿಟ್ಟವು. ಮದವೇರಿ ಸೊಂಡಿಲನ್ನು ತೂಗುತ್ತ ಬರುತ್ತಿರುವ ಆ ಆನೆಗಳನ್ನು ಕಂಡು ಬಣಜಿಗರಲ್ಲಿ ಕೆಲವರು ಓಡಿದರು. ಕೆಲವರು ಧೈರ್ಯದಿಂದ ಎದುರಿಸಿ ಭರ್ಜಿಗಳಿಂದ ತಿವಿದು ಅವುಗಳೊಡನೆ ಹೋರಾಡಿದರು. ಮದಕರಿಗಳು ಅವರನ್ನು ತುಳಿದವು. ವೀರ ಬಣಜಿಗರು ಅವುಗಳೊಡನೆ ಹೋರಾಡಿದರು. ಆದರೆ ಆನೆಗಳನ್ನು ಎದುರಿಸಿ ನಿಲ್ಲಲು ಸಾಧ್ಯವೇ? ಅವರು ಹಿಂದೆಗೆದು ದಿಕ್ಕು ದಿಕ್ಕಿಗೆ ಓಡಿದರು.

## ದೈವವ ನೆನೆದ ಭಕ್ತರಿಗುಂಟೆ ಭಯ

ಧೈರ್ಯವಾಗಿ ಹಿಂತಿರುಗಿ ಬರುತ್ತಿದ್ದ ಬಣಜಿಗರನ್ನು ನೋಡಿದ ಅವರ ಯಜಮಾನ ಇದನ್ನು ಬಗೆಹರಿಸುವುದು ಹೇಗೆ ಎಂದು ಚಿಂತಿಸಿದ. ಆ ವೈಶ್ಯ ಕುಲತಿಲಕನು ದಮಯಂತಿಗಾಗಿ ಮರುಗುತ್ತ ಹೇಳಿದ.

'ಅಮ್ಮಾ, ಮದಗಜಗಳು ನಮ್ಮನ್ನು ಕೊಲ್ಲುತ್ತಿವೆ. ಇದರಿಂದ ಪಾರಾಗುವ ಬಗೆ ಗೊತ್ತಿಲ್ಲ. ನೀವು ನಮ್ಮನ್ನು ನಂಬಿ ಬಂದಿರಿ. ನಿಮ್ಮನ್ನು ವಿಧಿ ಇಲ್ಲಿಗೆ ತಂದಿತು. ಈ ಲೋಕದಲ್ಲಿ ವಿಧಿ ಲಿಖಿತವನ್ನು ಮೀರುವವರಾರು?'

'ವೈಶ್ಯ ಪ್ರಮುಖರೇ, ನಾನು ಹುಟ್ಟಿದ್ದು ಭೀಮರಾಜನ ಮನೆಯಲ್ಲಿ. ನಳಚಕ್ರವರ್ತಿ ನನ್ನ ಪತಿ. ವೀರಸೇನ ನನ್ನ ಮಾವ. ಹೀಗಿದ್ದರೂ ನಾನು ಕಾಡಿನಲ್ಲಿ ಕಾಡಾನೆಗಳಿಗೆ ಈ ಶರೀರವನ್ನು ಬಲಿಯಾಗಿಸಬೇಕೆಂದು ವಿಧಿಯಾಗಿದ್ದರೆ, ನೀವೇನು ಮಾಡಲು ಸಾಧ್ಯ?' ಎಂದು ಮಂದಗಮನೆ ದಮಯಂತಿ ಹೇಳುತ್ತ ಕಣ್ಣುಮುಚ್ಚಿ ಮನಸ್ಸಿನಲ್ಲಿ ಶ್ರೀಹರಿಯ ಪಾದವನ್ನು ನೆನೆಯುತ್ತ 'ವನಜನಾಭ ಮುಕುಂದ ಸಲಹು' ಎಂದು ಪ್ರಾರ್ಥಿಸಿದಳು. ಆಗ ಆ ಆನೆಗಳು ಕಾಡಿಗೆ ಮರಳಿದವು. ದಯಯಂತಿ ವ್ಯಾಪಾರಿಗಳನ್ನು ಸಂತೈಸಿದಳು.

'ದೇವರನ್ನು ನೆನೆವ ಭಕ್ತರಿಗೆ ಭಯವಿಲ್ಲ' ಎಂದು ಧರ್ಮರಾಯನಿಗೆ ರೋಮಶ ಮುನಿಗಳು ಹೇಳಿದರು.

## ಸೈರಂಧ್ರಿ ದಮಯಂತಿ

ಆತಂಕದ ರಾತ್ರಿ ಕಳೆದು ಬೆಳಗಾಯಿತು. ವ್ಯಾಪಾರಿಗಳು ದಮಯಂತಿಯೊಂದಿಗೆ ನಡೆಯುತ್ತ ಚೇದಿ ಪಟ್ಟಣವನ್ನು ತಲುಪಿದರು. ಹೊಳೆಯುವ ಹೊನ್ನಿನಿಂದ ಕೂಡಿದ ಸೌಧಗಳನ್ನು, ತಳ ತಳ ಪ್ರಕಾಶಿಸುವ ಮಹಡಿ ಮನೆಗಳನ್ನು ನೋಡುತ್ತ ಹರ್ಷಗೊಂಡು ಪಟ್ಟಣವನ್ನು ಪ್ರವೇಶಿಸಿದರು.

ರಸಲೇಪದ ಹೊನ್ನೋ, ಮಲಿನ ವಸ್ತ್ರದಲ್ಲಿ ಅಡಗಿದ ರತ್ನವೋ, ಸೊರಗಿದ ಮೋಡದಲ್ಲಿ ಶೋಭಿಸುವ ಚಂದ್ರನೋ ಎಂಬಂತಿರುವ ದಮಯಂತಿ ಆ ಪುರದಲ್ಲಿ ನಡೆದು ಬರುತ್ತಿರಲು– ಪಟ್ಟಣಿಗರು ಅಲ್ಲಲ್ಲಿ ನಿಂತು ನೋಡುತ್ತ ಸಂತೋಷಪಟ್ಟರು. ಯಾರಿವಳು ಎಂದು ಅಚ್ಚರಿಗೊಂಡರು.

ಆ ಪಟ್ಟಣದ ಬೀದಿಯಲ್ಲಿ ಅವಳು ಸಡಗರದಿಂದ ಬರುತ್ತಿರಲು ಅವಳ ಇಂಪಾದ ನುಡಿಗೆ ಗಿಳಿ ಕೋಗಿಲೆಗಳು ನಲಿದವು! ಅವಳ ದುಂಡಾದ ಸ್ತನಭಾರಕ್ಕೆ ನಡು ಬಳುಕುತ್ತಿತ್ತು! ತಲೆಗೂದಲ ಭಾರಕ್ಕೆ ಕುತ್ತಿಗೆ ಬಾಗುತ್ತಿತ್ತು! ಬೊಗಸೆಗಣ್ಣುಗಳ ನೋಟವು ಕಾರ್ಮುಗಿಲೊಡೆದು ಮಿಂಚುವ ಮಿಂಚಿನಂತಿತ್ತು!

ಸ್ವರ್ಣಮಯವಾದ ಉಪ್ಪರಿಗೆಯಲ್ಲಿ ಸ್ತ್ರೀಯರ ಓಲಗದಲ್ಲಿದ್ದ ಚೇದಿರಾಜನ ಪತ್ನಿ ತಾವರೆಗಂಗಳ ದಮಯಂತಿಯನ್ನು ನೋಡಿದಳು. 'ಈ ಮಹಾಸತಿ ಯಾರು? ದೇವೇಂದ್ರನ ಪತ್ನಿಯೆ?' ಎಂದು ಕುತೂಹಲದಿಂದ ಬರ ಹೇಳಿದಳು. ಆ ಕರೆಯಂತೆ ದಮಯಯಂತಿ ಬಂದು ನಿಲ್ಲಲು ಆ ರಾಣಿಯು ಅವಳನ್ನು ಪ್ರಶ್ನಿಸಿದಳು.

'ತಾಯಿ, ನೀನು ಯಾರು? ಯಾವ ರಾಜನ ಹೆಂಡತಿ? ನೀನು ಈ ತುಂಬು ಪ್ರಾಯದಲ್ಲಿ ಕಳೆಗುಂದಿ ಮಸುಕಾಗಿರುವುದೇಕೆ?'

ಆ ನುಡಿ ಕೇಳಿ ನಳನೃಪನ ರಾಣಿಯ ಕಣ್ಣಿನಲ್ಲಿ ನೀರು ತುಂಬಿತು. ಅತಿ ದುಃಖದಿಂದ ತನ್ನ ವೃತ್ತಾಂತವನ್ನು ಹೇಳುತ್ತ ಹೀಗೆ ಪ್ರಾರ್ಥಿಸಿದಳು:

'ಅಮ್ಮ, ನನ್ನ ಪತಿ ಜೂಜಿನಲ್ಲಿ ರಾಜ್ಯವನ್ನು ಸೋತನು. ಕಾಡಿಗೆ ಬಂದು ನನ್ನನ್ನು ತೊರೆದು ಹೋದನು. ಬುದ್ಧಿಗೆಟ್ಟಂತಾಗಿ ತಿರುಗಾಡುತ್ತ ನಿಮ್ಮ ಪಾದದ ಬಳಿಗೆ ಬಂದಿದ್ದೇನೆ. ನೀವೇ ನನಗೆ ಗತಿ. ನಾನು ಪರದೇಶಿ. ಪರಹಿತವೇ ಪುಣ್ಯವಲ್ಲವೇ? ನೀವು ನನ್ನನ್ನು ರಕ್ಷಿಸಿ.'

ಅದನ್ನು ಕೇಳಿದ ರಾಣಿಯು ಘಲಿರು ಘಲಿರೆನುವ ನೂಪುರದ ಅಡಿಯಿಡುತ್ತ ಬಂದು ದಮಯಂತಿಯನ್ನು ಬಿಗಿದಪ್ಪಿಕೊಂಡಳು. ಕಂಬನಿ ಒರೆಸಿ, 'ತರುಣಿಯೇ, ವ್ಯಥೆಯನ್ನು ಬಿಡು. ರೇಷ್ಮೆ ಸೀರೆಯನ್ನುಡು. ಹೂ ಸರವನ್ನು ಮುಡಿ' ಎಂದು ಹೇಳಿ ಉಪಚರಿಸಿದಳು. ಮನಸ್ಸು ತುಂಬಿ ಬಂದ ದಮಯಂತಿಯು ನುಡಿದಳು.

'ದೇವಿ, ನೀವು ತೋರಿದ ಪ್ರೀತಿಯೇ ಒಂದು ಗೌರವ. ನನಗಿನ್ನಾವ ಭೂಷಣವೂ ಬೇಡ. ಪರದೇಶಿಯಾದ ನಾನು ತಮ್ಮ ಚರಣ ಸೇವೆಯಲ್ಲಿರುತ್ತೇನೆ. ನಾನು ಹೀನ ಕೆಲಸ ಮಾಡುವವಳಲ್ಲ. ನನ್ನನ್ನು ರಕ್ಷಿಸುವ ರೀತಿ ನೀವೇ ತಿಳಿದಿರುವಿರಿ.'

'ನಮ್ಮಿಂದ ನಿನಗೆ ಯಾವ ತೊಂದರೆಯೂ ಆಗುವುದಿಲ್ಲ. ಹೀನ ಕೆಲಸವನ್ನು ನಾವು ಹೇಳುವುದಿಲ್ಲ. ಅದರ ಚಿಂತೆ ಮಾಡಬೇಡ. ನನಗೆ ಸುನೀತಿ ಎಂಬ ಮಗಳಿದ್ದಾಳೆ. ಅವಳಲ್ಲಿ ಸೈರಂಧ್ರಿ (ಅರಮನೆಯ ಅಂತಃಪುರದ ದಾಸಿ)ಯಾಗಿ ಸದಾಕಾಲ ಇರಬಹುದು' ಎಂದು ರಾಣಿಯು ನಸುನಗುತ್ತ ಹೇಳಿ– ನೇಮಿಸಿ, ಮಗಳ ಮನೆಗೆ ಕಳುಹಿಸಿದಳು.

ಚೇದಿರಾಜನ ಪತ್ನಿಗೆ ದಮಯಂತಿಯು ತನ್ನ ಸಹೋದರಿಯ ಮಗಳೆಂದು ತಿಳಿದಿರಲಿಲ್ಲ. ಯಾರ ಮಡದಿಯೆಂಬುದು ಗೊತ್ತಿರಲಿಲ್ಲ. ಆದರೂ ಅವಳನ್ನು ಭೇದಭಾವವಿಲ್ಲದೆ ಮಗಳಂತೆ ಕಂಡಳು. ಕರುಣೆಯಿಂದ ನೋಡಿಕೊಂಡಳು.

ದಮಯಂತಿಯು ಸುನೀತಿಯ ಮನೆಯಲ್ಲಿ ಯಾವುದೇ ಭೇದವಿಲ್ಲದೆ ದಿನ ಕಳೆದಳು. ಅವಳ ಮನಸ್ಸಿನ ದುಗುಡ ಕಡಿಮೆಯಾಯಿತು. ಪ್ರತಿದಿನ ಆಹಾರ ನಿದ್ರೆ ತೊರೆದು 'ಶ್ರೀಹರಿಯ ಕೃಪೆಯಿಂದ ತನ್ನ ಪತಿ ಯಾವಾಗ ಬಂದು ಮುಖ ತೋರಿಸುವನೋ' ಎಂದು ಚಿಂತಿಸುತ್ತಿದ್ದಳು.

## ಕಾಲವಾವನ ಕೀಳು ಮಾಡದು

ಕುಂತೀ ತನಯನೇ ಕೇಳು. ನಳಮಹಾರಾಜನು ದಮಯಂತಿಯು ಗಾಢನಿದ್ರೆಯಲ್ಲಿದ್ದಾಗ ಬಿಟ್ಟುಹೋದನು. ಕಾಲವು ಯಾರನ್ನು ತಾನೆ ಕೀಳಾಗುವಂತೆ ಮಾಡದು? ಅದನ್ನು ಶೂಲಪಾಣಿ ಶಿವನೇ ಬಲ್ಲನು.